ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:.ವಿವಾದ:72/2015-16 ದಿ:24-06-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಬಿ. ಯಶೋದಮ್ಮ ಗಂಡ:ಬಿ. ದೊಡ್ಡಹೊನ್ನಾರೆಡ್ಡಿ
ಬೂದುಗುಪ್ಪ ಗ್ರಾಮ ಸಿರುಗುಪ್ಪ ತಾಲೂಕ

3) ವೇಮರೆಡ್ಡಿ ತಂದೆ: ಹೊನ್ನಾರೆಡ್ಡಿ
ಬೂದುಗುಪ್ಪ ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಜೆ. ವಸಂತ ಗಂಡ: ಜೆ. ಲಕ್ಷ್ಮಣ ರೆಡ್ಡಿ
ಸಿರುಗುಪ್ಪ ತಾ: ಸಿರುಗುಪ್ಪ

**ವಿವಾದಿತ ಜಮೀನಿನ ವಿವರ**

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಮೈಲಾಪುರ ಗ್ರಾಮ | 159/D | 2-76 | H 18/2015-16 | 85/2015-16 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ ಮೈಲಾಪುರ ಗ್ರಾಮದ ಸ.ನಂ.159/D ವಿಸ್ತೀರ್ಣ 2-76 ಜಮೀನಿಗೆ ಸಂಬಂಧಿಸಿದಂತೆ ಸಿರುಗುಪ್ಪ ಉಪ ನೊಂದಣಿ ಕಛೇರಿ ದಾನ ಪತ್ರ ನಂ: **05285/15-16 Dt.04-11-2015** **ಪ್ರಕಾರ ವೇಮರೆಡ್ಡಿ ಬಿ. ತಂದೆ: ದೊಡ್ಡ ಹೊನ್ನಾರೆಡ್ಡಿ ಇವರ ಹೆಸರಿನಲ್ಲಿ ದಾನಪತ್ರ ಪ್ರಕಾರ** ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಜೆ.. ವಸಂತ ಗಂಡ: ಜೆ.ಲಕ್ಷ್ಮಣ ರೆಡ್ಡಿ , ಸಿರುಗುಪ್ಪ ಇವರು ದಿ: 27-11-2015** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ: 18-3-2016, 2-4-2016, 20-5-2016 ಮತ್ತು 3-6-2016 ರಂದು ಪ್ರಕರಣಕ್ಕೆ** ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಬಂಧಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ ವೇಮರೆಡ್ಡಿ ಬಿ. ತಂದೆ: ದೊಡ್ಡ ಹೊನ್ನಾರೆಡ್ಡಿ ಬೂದುಗೆಪ್ಪ ಗ್ರಾಮ ಹಾಲಿ ವಾಸ: ಬೆಂಗಳೂರು ...ಉ ಮೈಲಾಪುರ ಗ್ರಾಮದ ಸ.ನಂ.159/D ವಿಸ್ತೀರ್ಣ 2-76 ಜಮೀನು ನನ್ನ ತಾಯಿಯಾದ ಬಿ. ಯಶೋದಮ್ಮ ಗಂಡ: ಲೇಟ್ ಬಿ. ದೊಡ್ಡ ಹೊನ್ನಾರೆಡ್ಡಿ ಇವರಿಂದನನ್ನ ಹೆಸರಿಗೆ ಸಿರುಗುಪ್ಪ ಉಪ ನೊಂದಣಿ ಕಛೇರಿ ದಾನ ಪತ್ರ ನಂ: **05285/15-16 Dt.04-11-2015** ಪ್ರಕಾರ ದಾನಪತ್ರ ನೊಂದಣಿ ಹೊಂದಿರುತ್ತೇನೆ. ಹಕ್ಕು ಬದಲಾವಣೆ ಸಂದರ್ಭದಲ್ಲಿ ಜೆ. ವಸಂತ ಗಂಡ: ಜೆ. ಲಕ್ಷ್ಮಣ ರೆಡ್ಡಿ ಇವರು ನಿರಾಧಾರವಾಗಿ ತಮಗೂ ಆಸ್ತಿಯಲ್ಲಿ ಪಾಲು ಬರಬೇಕೆಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಯಾವುದೇ ಪೂರಕ ದಾಖಲೆಪತ್ರಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ಲಿಖಿತ ಹೇಳಿಕೆಗಳನ್ನು ಸಹ ನೀಡಿರುವುದಿಲ್ಲ ಆದ್ದರಿಂದ ನಿರಾಧಾರವಾದ ಅವರ ತಕರಾರು ಅರ್ಜಿಯನ್ನು ತಳ್ಳಿ ಹಾಕಿ ಉಪನೊಂದಣಿ ಕಛೇರಿಯ ನೊಂದಾಯಿತ ದಾನಪತ್ರ ಪ್ರಕಾರ ನನ್ನ ಹೆಸರಿಗಬೆ ಹಕ್ಕು ಬದಲಾವಣೆ ಮಾಡಲು ಪ್ರಮಾಣಪತ್ರ ನೀಡಿದ್ದು, ನನ್ನ ತಾಯಿಯವರ ಸ್ವಯಾರ್ಜಿತ ಆಸ್ತಿ ದಾನವಾಗಿ ಪೂರ್ಣ ಸಮ್ಮತಿಯಿಂದ ರಿಜಿಸ್ಟರ್ ಮಾಡಿಸಿಕೊಂಡಿರುತ್ತೇನೆ. ಎಂದು ಲಿಖಿತ ಹೇಳಿಕೆ ನೀಡಿರುತ್ತಾರೆ.

## ಪ್ರತಿವಾದಿಗಳು

ಪ್ರತಿವಾದಿಗಳಾದ ಜೆ.ವಸಂತ ಗಂಡ: ಜೆ.ಲಕ್ಷ್ಮಣ ರೆಡ್ಡಿ ಸಿರುಗುಪ್ಪ ಇವರು ಮೈಲಾಪುರ ಗ್ರಾಮದ ಸ.ನಂ.159/D ವಿಸ್ತೀರ್ಣ 2-76 ಜಮೀನು ಜಿ. ಯಶೋದಮ್ಮ ಗಂಡ: ಲೇಟ್ ಬಿ. ದೊಡ್ಡ ಹೊನ್ನಾರೆಡ್ಡಿ ಯವರಿಂದ ಮಗನ ಹೆಸರಿಗೆ ದಾನಪತ್ರ ಪ್ರಕರ ವೇಮರೆಡ್ಡಿ ಬಿ. ತಂದೆ: ದೊಡ್ಡ ಹೊನ್ನಾರೆಡ್ಡಿ ಇವರ ಹೆಸರಿಗೆ ಹಕ್ಕು ಬದಲಾವಣೆ ಸಂದರ್ಭದಲ್ಲಿ ದಿ: 27-11-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ದಿ: 18-3-2016, 2-4-2016, 20-5-2016, 3-6-2016 ರಂದು ಹಾಜರಾಗಿರುತ್ತಾರೆ. ದಿ:2-4-2016 ರಂದು ವಿಚಾರಣೆ ಸಮಯದಲ್ಲಿ ಹಿರಿಯ ಸಿವಿಲ್ ನ್ಯಾಯಾಲಯ ಸಿರುಗುಪ್ಪದಲ್ಲಿ ಪಾಲು ವಿಭಾಗಕ್ಕೆ ಮತ್ತು ಇಂಜಕ್ಷನ್ ಆದೇಶ ನೀಡಲು ಅರ್ಜಿ ದಾಖಲು ಮಾಡಲಾಗಿದೆ ಎಂದು ಲಿಖಿತ ಹೇಳಿಕೆ ನೀಡಿರುತ್ತಾರೆ. ಹಾಗೂ ದಿ:3-6-2016 ರಂದು ಪ್ರಕರಣವನ್ನು ಹಿರಿಯ ಸಿವಿಲ್ ನ್ಯಾಯಾಲಯ ಸಿರುಗುಪ್ಪ ಕ್ಕೆ ವರ್ಗಾಯಿಸಲು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ತಕರಾರು ದಾರರು ಸಿವಿಲ್ ನ್ಯಾಯಾಲಯ ಸಿರುಗುಪ್ಪ ಕೇಸ್ ನಂ: 572/2016 ಪ್ರಕರಣ ಇರುವುದರಿಂದ ನ್ಯಾಯಾಲಯದ ಅಂತಿಮ ತೀರ್ಪಿನ ಆದೇಶಕ್ಕೆ ಒಳಪಟ್ಟು ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಮೈಲಾಪುರ ಗ್ರಾಮದ 159/D ವಿಸ್ತೀರ್ಣ 2-76 ಜಮೀನು ಸಿರುಗುಪ್ಪ ಸಬ್ ಉಪನೊಂದಣಿ ಕಛೇರಿ ಪತ್ರ ನಂ: 5285/2015-16 ದಿ: 4-11-2015 ರ ದಾನ ಪತ್ರ ನೊಂದಣಿ ಪ್ರಕಾರ ಹಾಗೂ ಸಿವಿಲ್ ನ್ಯಾಯಾಲಯದ ಅಂತಿಮ ತೀರ್ಪಿನ ಆದೇಶಕ್ಕೆ ಒಳಪಟ್ಟು ವೇಮರೆಡ್ಡಿ ತಂದೆ: ದೊಡ್ಡ ಹೊನ್ನಾರೆಡ್ಡಿ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 24-06-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:

0. ವಾದಿ ಹಾಗೂ ಪ್ರತಿವಾದಿಗಳು
0. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
0. ಕಛೇರಿ ಕಡತಕ್ಕೆ.

ನಾಡ ಕಾರ್ಯಾಲಯ, ಕರೂರು, ಸಿರುಗುಪ್ಪ ತಾಲೂಕು
ದಿ:..........